## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : **2017–18ನೇ** ಸಾಲಿನಲ್ಲಿ ರಾಷ್ಟ್ರೀಯ ಜೈವಾನಿಲ ಮತ್ತು ಗೊಬ್ಬರ ನಿರ್ವಹಣೆ ಕಾರ್ಯಕ್ರಮ (NBMMP)ದ ಅನುಷ್ಠಾನಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಪೂರಕವಾಗಿ ನೀಡುತ್ತಿರುವ ರಾಜ್ಯ ಸಹಾಯಧನವನ್ನು ಪರಿಷ್ಕರಿಸುವ ಕುರಿತು.

ಓದಲಾಗಿದೆ : ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 16 ಜೈಅಯೋ 2001, ದಿನಾಂಕ 24.05.2002.

### ಪ್ರಸ್ತಾವನೆ

ರಾಷ್ಟ್ರೀಯ ಜೈವಾನಿಲ ಮತ್ತು ಗೊಬ್ಬರ ನಿರ್ವಹಣೆ ಕಾರ್ಯಕ್ರಮವು (NBMMP) ಕೇಂದ್ರ ವಲಯದ ಯೋಜನೆಯಾಗಿದ್ದು, ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ರಾಜ್ಯದಲ್ಲಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಕಾರ್ಯಕ್ರಮವನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರವು ಪೂರಕವಾಗಿ 1992–93ನೇ ಸಾಲಿನಿಂದ ರಾಜ್ಯ ಅನಿಲ ಯೋಜನೆಯನ್ನು ಜಾರಿಗೊಳಿಸಿ, ಮೇಲೆ ಓದಲಾದ ಆದೇಶದನ್ವಯ ರಾಜ್ಯ ಸಹಾಯಧನವನ್ನು ನೀಡುತ್ತಿದೆ.

ಮುಂದುವರೆದು ಇತ್ತೀಚಿನ ದಿನಗಳಲ್ಲಿ ಘಟಕಗಳ ನಿರ್ಮಾಣಕ್ಕೆ ಅಗತ್ಯವಿರುವ ಕಚ್ಚಾ ಸಾಮಾಗ್ರಿಗಳ ಬೆಲೆ ಹೆಚ್ಚಳ (ಉದಾ: ಮರಳಿನ ಸಮಸ್ಯೆ, ಸಾಗಾಣಿಕೆ ವೆಚ್ಚ, ಸಿಮೆಂಟ್, Steel ಇತ್ಯಾದಿ) ಬರಗಾಲ, ಜಾನುವಾರು ಕೊರತೆ ಹಾಗೂ ಸಾಮರ್ಥ್ಯವಾರು ಘಟಕಗಳನ್ನು ನಿರ್ಮಿಸಲು ತಗಲುವ ಅಂದಾಜು ವೆಚ್ಚ ಹಾಗೂ ಸರ್ಕಾರದಿಂದ ನೀಡುತ್ತಿರುವ ಸಹಾಯಧನ ಮೊತ್ತದಲ್ಲಿನ ವ್ಯತ್ಯಾಸವನ್ನು ಭರಿಸಲು ಗ್ರಾಮೀಣ ಜನರು ಅಶಕ್ತರಾಗಿರುವ ಕಾರಣ ಗ್ರಾಮೀಣ ಪ್ರದೇಶಗಳಲ್ಲಿ ಫಲಾನುಭವಿಗಳು ಜೈವಾನಿಲ ಸ್ಥಾವರಗಳನ್ನು ನಿರ್ಮಿಸಿಕೊಳ್ಳಲು ಮುಂದೆ ಬರುತ್ತಿಲ್ಲವೆಂಬ ಅಂಶವು ಒಂದು ಕಡೆಯಾದರೆ ಇನ್ನೊಂದೆಡೆ ಸುಲಭವಾಗಿ / ಉಚಿತವಾಗಿ ದೊರೆಯುತ್ತಿರುವ LPG.

ಈ ಕಾರಣಗಳಿಂದಾಗಿ ಕಾರ್ಯಕ್ರಮದಡಿ ಪ್ರಗತಿ ತೀವ್ರವಾಗಿ ಕುಂಠಿತಗೊಂಡಿರುವುದನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿ, ಕಾರ್ಯಕ್ರಮದ ಸಮರ್ಪಕ ಅನುಷ್ಠಾನದ ಹಿತದೃಷ್ಟಿಯಿಂದ (ಉದಾ: ಮಹಿಳೆಯರ ಮತ್ತು ಮಕ್ಕಳ ಆರೋಗ್ಯ ಸುಧಾರಣೆ, ಅರಣ್ಯ ನಾಶ ತಡೆಗಟ್ಟುವುದು, ಪರಿಸರ ಮಾಲಿನ್ಯವನ್ನು ಸಂರಕ್ಷಿಸುವುದು ಇತ್ಯಾದಿ) ಕೇಂದ್ರ ಸರ್ಕಾರವು ನೀಡುತ್ತಿರುವ ಕೇಂದ್ರ ಸಹಾಯಧನದೊಂದಿಗೆ ಪೂರಕವಾಗಿ ರಾಜ್ಯ ಸಹಾಯಧನವನ್ನು ಪರಿಷ್ಕರಿಸಲು ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 91 ಜೈಅಯೋ 2016, ಬೆಂಗಳೂರು ದಿನಾಂಕ 26.10.2017**

ಪ್ರಸ್ತಾವನೆಯಲ್ಲಿ ವಿವರಿಸಲಾದಂತೆ ರಾಷ್ಟ್ರೀಯ ಜೈವಾನಿಲ ಮತ್ತು ಗೊಬ್ಬರ ನಿರ್ವಹಣೆ ಕಾರ್ಯಕ್ರಮವು (NBMMP) ಕೇಂದ್ರ ವಲಯದ ಯೋಜನೆಯಾಗಿದ್ದು, ಕೇಂದ್ರ ಸರ್ಕಾರವು ನಿಗದಿಪಡಿಸುತ್ತಿರುವ ಭೌತಿಕ ಗುರಿ ಹಾಗೂ ಬಿಡುಗಡೆ ಮಾಡುವ ಕೇಂದ್ರ ಸಹಾಯಧನಕ್ಕೆ ಪೂರಕವಾಗಿ ರಾಜ್ಯ ಸರ್ಕಾರವು ಸಹ 02 ಘ.ಮೀ ಹಾಗೂ ಮೇಲ್ಪಟ್ಟು ನಿರ್ಮಿಸುವ ಜೈವಾನಿಲ ಸ್ಥಾವರಗಳಿಗೆ ಹಾಲಿ ಇರುವ ರಾಜ್ಯ ಸಹಾಯಧನ ರೂ.3500/–ನ್ನು ಪರಿಷ್ಕರಿಸಿ ರೂ.6000/–ಗಳಿಗೆ ಹೆಚ್ಚಿಸಿ ಆದೇಶಿಸಿದೆ.

ಪ್ರಸ್ತುತ ಪರಿಷ್ಕರಿಸಲಾದ ರಾಜ್ಯ ಸಹಾಯಧನವು ದಿನಾಂಕ 01 ನೇ ಏಪ್ರಿಲ್ 2017ರ ಪೂರ್ವಾನ್ವಯವಾಗುವಂತೆ ಜಾರಿಗೊಳಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಸಹಮತಿ ಸಂಖ್ಯೆ ಆಇ 268/ವೆಚ್ಚ-6/2017 ದಿನಾಂಕ 09.10.2017 ರಲ್ಲಿ ಪಡೆದು ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎನ್.ಕೃಷ್ಣಪ್ಪ)
ನಿರ್ದೇಶಕರು (ಗ್ರಾಮೂಸೌ-2) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ :

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯೋಜನಾ ಇಲಾಖೆ, ವಿಧಾನ ಸೌಧ, ಬೆಂಗಳೂರು
4. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
5. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಉಪ ಕಾರ್ಯದರ್ಶಿ (ಅಭಿವೃದ್ಧಿ)/ಯೋಜನಾ ನಿರ್ದೇಶಕರು / ಮುಖ್ಯ ಲೆಕ್ಕಾಧಿಕಾರಿಗಳು.
6. ಎಲ್ಲಾ ಜಿಲ್ಲೆಯ ಜಿಲ್ಲಾ ಖಜಾನಾಧಿಕಾರಿಗಳು.
7. ವಿಶೇಷ ಅಧಿಕಾರಿ, ಗಣಕ ಕೋಶ, ಗ್ರಾಅಪಂ ಇಲಾಖೆ.

ಪ್ರತಿಯನ್ನು:

1. ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್)ರವರ ಆಪ್ತ ಕಾರ್ಯದರ್ಶಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
2. ನಿರ್ದೇಶಕರು, ಪಿಎಂಐ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
3. ಆಂತರಿಕ ಆರ್ಥಿಕ ಸಲಹೆಗಾರರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
4. ರಕ್ಷಾ ಕಡತಕ್ಕೆ/ ಹೆಚ್ಚುವರಿ ಪ್ರತಿ.